maintain roads. But when Government have spent money out of their funds, whose responsibility is it to make arrangements for their maintenance ?

Sri Kadidal MANJAPPA.—When the District Boards ask for money for repair of certain roads, the Government give them grants, but the maintenance lies with the District Boards themselves.

Sri H. M. CHANNABASAPPA.—My question is specific. When Government spend money and form new roads, whose responsibility is it to make arrangements for their maintenance ?

Sri Kadidal MANJAPPA.—It is the responsibility of the Local Self-Government as well as the local people of the area.

Sri H. M. CHANNABASAPPA.—Did Government form roads after obtaining the consent of the local bodies for maintenance ?

Sri Kadidal MANJAPPA.—We could not obtain the consent of the local bodies in some cases, for instance, in cases where roads were formed during distress days.

Sri H. M. CHANNABASAPPA.—Under what provision of law are the Local Boards bound to maintain all the roads that are formed by Government ?

Sri Kadidal MANJAPPA.—In the interest of the rural areas, and according to the provisions contained in the Village Panchayets and District Boards Act, they have to maintain them.

Sri H. M. CHANNABASAPPA.—May I take it that the Village Panchayets and District Boards Act provides that all the roads formed by Government at Government cost have to be maintained by Village Panchayets and District Boards ?

Sri Kadidal MANJAPPA.—Not all. If they are interested in such roads, they ought to maintain them.

Sri H. M. CHANNABASAPPA.—What about the fate of the other roads in which they are not interested ?

Sri Kadidal MANJAPPA.—The Village Panchayets should take care of them.

Sri H. M. CHANNABASAPPA.—If the Village Panchayets are not interested and if Government money was spent on those roads, whose responsibility is it to maintain them ?

Sri Kadidal MANJAPPA.—It is the responsibility of the people of the area.

(*Sri T. Hanumiah rose*).

Mr. SPEAKER.—We will go to the next question. There is only half an hour and there are 12 more questions.

Inter-Village Communication Roads in Arasikere and Channarayapatna Taluks.

Q.—548. **Sri B. CHIKKANNA** (Javagal).—

Will the Government be pleased to state :—

(*a*) the inter-village communication roads formed newly since 1952 in Arasikere and Channarayapatna Taluks by the Hassan District Board ;

(*b*) the names of villages which the roads connect and the length of the roads formed ;

(*c*) the amount of expenditure that is being incurred every year for the repairs of these roads ?

A.—**Sri T. CHANNIAH** (Minister for Public Health and Local Self-Government).—

(*a*)

Channarayapatna Taluk.

1. Adarur-Srinivasapur road
2. Hirisave-Nuggihalli road to Didiga.
3. Hirisave-Didiga road
4. Volagerehalli-Gandasi shandy road.
5. Begur-Nuggihalli road
6. Jodakatte to Mudnahalli

Arasikere Taluk.

7. Bendekere-Garudanagiri road
8. Konehalli-Tiptur-Dudda road
9. Aggunda-Dummenahalli road
10. Gandasi-Bageshapur road
11. Arasikere-Byrambudi—Javagal road.
12. Madbalu—Kanakatte—Dibbur road.
13. Doddametikurke—Sadarahalli road.

(SRI T. CHANNIAH.)

14. Kittanakere-Chiknayakanahalli boundary road
15. Rampura-Sosivala road
16. Arasikere-Kuruvanka road
17. Road from 108th mile stone of Arasikere-Renavar road to join Arasikere-Byrambudi road.

(*b*)

Channarayapatna Taluk	*Miles*	*Furlongs*
1. Adagur, Doddaganni, Srinivasapura.	2	4
2. Basavanapur, Sosalagere J. Mavinahalli Bilakere Kannanaghatta, Narihalli, Didiga.	7	0
3. Jinnenahalli, Nagenahalli, Hulavalli, Narihalli.	2	0
4. Volagerehalli, Gandasi	5	4
5. Bagur, Dyavanahalli, Dasapura, Honnamaranahalli, Nuggihalli.	2	0
6. Mudnahalli, Jodakatte	1	0
Arasikere Taluk.		
7 Bendekere, Komaraghatta, Kuruvanka, Garudanagiri.	2	0
8. Yadavanahalli, Konehalli, Mallenahalli, Somenahalli, Sannenahalli.	3	0
9. Aggunda, Dummenahalli.	3	0
10. Gandasi, Bageshapur ...	2	0
11. Arasikere, Sankondanahalli, Byrambudi, Singenahalli, Javagal.	3	0
12. Madhalu, Yachagondanahalli, Dibbur, Kanakatte.	2	0
13. Doddametikurke, Soppinahalli, Sadarahalli.]	2	0
14. Kittanakere, Kadlimage, Maddarahalli.	1	4
15. Rampura-Sosivala road	1	0
16. Arasikere, Kuruvanka	2	4
17. Bendekere, Chikkoor, Madanahalli.	1	4

(*c*) Rs. 18,750 per year.

ಶ್ರೀ ಬಿ. ಚಿಕ್ಕಣ್ಣ.—ರಸ್ತೆಗಳು ಪ್ರಾರಂಭವಾಗಿ 5-6 ವರ್ಷಗಳಾಗಿದ್ದರೂ ಕೂಡ ಪ್ರತಿವರ್ಷವೂ ರಿಪೇರಿ ಆಗದೆ ಉಳಿಯುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಪ್ರತಿವರ್ಷವೂ annua maintenance ಗಾಗಿ ಹಣ allot ಮಾಡಿದೆ. ಅನೇಕ ಕಡೆ ರಿಪೇರಿಮಾಡಲಾಗುತ್ತಿದೆ. Maintenance ಗಾಗಿ ಕೊಟ್ಟಿದ್ದರೂ ಸಕಾಲಕ್ಕೆ ಕೆಲವು ರಸ್ತೆಗಳು ರಿಪೇರಿ ಆಗದೆ ಇರಬಹುದು.

ಶ್ರೀ ಬಿ. ಚಿಕ್ಕಣ್ಣ.—ಒಂದು ಮೈಲಿಗೆ ಎಷ್ಟು ಹಣ provide ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಅದು ರಸ್ತೆಯ condition ಮೇಲೆ ಹೋಗುತ್ತದೆ. ಇಷ್ಟೇ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಕೆಲವು ರಸ್ತೆಗಳ ರಿಪೇರಿ ಆಗದೆ ಹಣ ಖರ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ರಸ್ತೆಯನ್ನು ಮಾಡುವಾಗ 8-10 ಮೈಲಿಗಳಿರುತ್ತವೆ. ಅದರಲ್ಲಿ 2-3 ಮೈಲ ಮಾತ್ರ ಮಾಡಿದ್ದೇವೆ ಎಂದು ಹೇಳಿದ್ದೀರಿ. ಗಂಡಸಿಯಿಂದ ಬಾಗೇಶಪುರಕ್ಕೆ ಆರು ಮೈಲಿಗಳಿವೆ. ಎರಡು ಮೈಲಿ ಮಾತ್ರ ಆಗಿದೆ ಎಂದು ತಿಳಿಸಿದ್ದೀರಿ. ಈಗ ಎರಡು ಮೈಲಿ ಆಗಿದೆಯೋ ಅಥವಾ ಆರು ಮೈಲಿಗಳನ್ನು ಮಾಡಿ ಕೆಲಸ ಮುಗಿದಿದೆಯೋ?

ಶ್ರೀ ಟಿ. ಚನ್ನಯ್ಯ.—ಮಾಡಿರತಕ್ಕಂಥ ಲೆಬ್ಬವನ್ನೆಲ್ಲಾ ಕೊಟ್ಟಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಈರೀತಿ ಎರಡು ಮೈಲಿಮಾಡಿ 8-10 ವರ್ಷಗಳು ಹಾಗೆಯೇ ಬಿಟ್ಟುಬಿಡುವುದರಿಂದ ದೇಶದ ಹಣ ಅನ್ಯಾಯವಾಗಿ ಖರ್ಚಾದಂತಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅನ್ಯಾಯ ಏನೂ ಇಲ್ಲ. ಉಳಿದ ರಸ್ತೆಗಳನ್ನು ಮುಂದಿನ ವರ್ಷ ತೆಗೆದುಕೊಂಡು ರಿಪೇರಿಮಾಡಲಾಗುತ್ತದೆ.

12-30 P.M.

ಶ್ರೀ ಬಿ. ಚಿಕ್ಕಣ್ಣ.—ಈ ರೀತಿ ಎರಡೆರಡು ಮೈಲ ರಸ್ತೆಮಾಡಿ ಬಿಡುವುದರಿಂದ ಜನತೆಗೆ ಏನು ಅನುಕೂಲವಾಗುತ್ತದೆ?

ಶ್ರೀ ಟಿ. ಚನ್ನಯ್ಯ.—ಹಣ ಎಷ್ಟಿದೆಯೋ ಅದಕ್ಕನುಸಾರವಾಗಿ ಖರ್ಚು ಮಾಡುತ್ತಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—(c) ಪ್ರಶ್ನೆಗೆ ಉತ್ತರವಾಗಿ ಒಟ್ಟು ಎಷ್ಟು ಖರ್ಚಾಗಿದೆಯೆಂದು ಹೇಳಿದ್ದೀರೋ ಅದರಲ್ಲಿ ಅರಸೀಕೆರೆ ತಾಲ್ಲೂಕಿಗೆಷ್ಟು ಖರ್ಚಾಗಿದೆಯೆಂಬುದನ್ನು ಹೇಳುತ್ತೀರಾ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—(ಎ) ಪ್ರಶ್ನೆಯಲ್ಲಿ ಕೊಟ್ಟಿರುವ ರಸ್ತೆಗಳಲ್ಲಿ ಆಗುಂದ-ದುಮ್ಮನಹಳ್ಳಿ ರಸ್ತೆಯು inter-district ರಸ್ತೆಯೆಂಬುದು ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—ಇದು ತುಮಕೂರು ಮತ್ತು ಹಾಸನ ಡಿಸ್ಟ್ರಿಕ್ಟ್‌ಗಳನ್ನು connect ಮಾಡುವ ಮುಖ್ಯವಾದ ರಸ್ತೆಯಾಗಿರುವುದರಿಂದ ಸರ್ಕಾರದವರು ಈ ರಸ್ತೆಯ ಖರ್ಚನ್ನು ಸ್ಟೇಟ್ ಫಂಡಿನಿಂದ ವಹಿಸುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ಪರಿಶೀಲಿಸಬೇಕಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಗ್ರಾಮಾಂತರಗಳಲ್ಲಿರತಕ್ಕ ರಸ್ತೆಗಳಿಗೆ ಸರ್ಕಾರದವರು ಹೆಚ್ಚು ಗಮನ ಕೊಡದೆ ಪಟ್ಟಣವಾಸದ ರಸ್ತೆಗಳಿಗೇ ಹೆಚ್ಚು ಗಮನ ಕೊಟ್ಟು ಗ್ರಾಂಟ್ ರೂಪವಾಗಿಯೂ ಸಾಲದ ರೂಪವಾಗಿಯೂ ಸಹಾಯಮಾಡಿ ಕಾರುಗಳನ್ನು ಚೆನ್ನಾಗಿ

ಓಡಾಡಿಸುವುದಕ್ಕೆ ಅನುಕೂಲವಾಡಿಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚೆನ್ನಯ್ಯ.—ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಗ್ರಾಮಾಂತರಗಳಲ್ಲಿ ಎತ್ತಿನ ಗಾಡಿಗಳೂ ಕೂಡ ಊರಿನಿಂದ ಊರಿಗೆ ಹೋಗದಂತಿರುವ ರಸ್ತೆಗಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅಂಥ ರಸ್ತೆಗಳಿರುವುದೂ ಗೊತ್ತಿದೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅಲ್ಲಿಗೂ ಗ್ರಾಂಟ್‌ರೂಪದಲ್ಲಿ ಮತ್ತು ಸಾಲದ ರೂಪದಲ್ಲಿ ಸಹಾಯಮಾಡಿ ಹೊಸ ರಸ್ತೆಗಳನ್ನೇನಾದರೂ ಮಾಡುವುದಕ್ಕೆ ಏರ್ಪಾಡುಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಮುಖ್ಯವಾಗಿ ನಮ್ಮ ಮುಂದಿರುವ ಪ್ರಶ್ನೆ ಹೊಸ ಪ್ರಶ್ನೆ. ಗ್ರಾಮಾಂತರಗಳಲ್ಲೂ ರಸ್ತೆಗಳ ರಿಪೇರಿ ಮಾಡಿಸತಕ್ಕ ಅಗತ್ಯ ವಿದೆಯೆಂಬುದು ನಿಜ, ಆದರೆ ಕೆಲವು ಭಾಗಗಳ maintenance ನ್ನು ಸರ್ಕಾರದವರೂ ಇನ್ನು ಕೆಲವು ಭಾಗಗಳ maintenance ನ್ನು ಸ್ಥಳೀಯ ಸಂಸ್ಥೆಗಳೂ ವಹಿಸಬೇಕಾಗುತ್ತದೆ. ಎಲ್ಲಾ ರಸ್ತೆಗಳನ್ನೂ ಸರ್ಕಾರದವರೇ ಮಾಡುವುದಕ್ಕಾಗುವುದಿಲ್ಲವೆಂದು ನಾನು ಮತ್ತೊಮ್ಮೆ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಹನುಮಯ್ಯ.—ಮ ನಿಸಿಪಲ್ ಪ್ರದೇಶದಲ್ಲಿ ಸಾಲವನ್ನೂ ಗ್ರಾಂಟನ್ನೂ ಕೊಟ್ಟು ಸರಿಮಾಡಿಸುವುದೂ ಈ ಹಳ್ಳಿಗಾಡಿನ ರಸ್ತೆಗಳಿಗೆ ಗ್ರಾಂಟ್ ಅಗಲ ಸಾಲವಾಗಲೀ ಒಂದನ್ನೂ ಕೊಡದೆ ಇರುವುದೂ ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪಟ್ಟಣವಾಸ ಪ್ರದೇಶದಲ್ಲಿ ಗಡಿಯನ್ನು ಹಾದು ಹೋಗತಕ್ಕ State Fund ರಸ್ತೆಗಳಿರುತ್ತವೆ. ಅವುಗಳನ್ನು ಮಾತ್ರ ಸರ್ಕಾರದವರು maintain ಮಾಡುತ್ತಾರೆ. ಇತರ ರಸ್ತೆಗಳನ್ನು ಸಂಬಂಧಪಟ್ಟ ಮುನಿಸಿಪಾಲಟಿಗಳವರೇ maintain ಮಾಡುತ್ತಾರೆ, ಸರ್ಕಾರದವರು ಮಾಡುತ್ತಿಲ್ಲವೆಂಬುದನ್ನು ಹೇಳಬೇಕಾಗಿಲ್ಲ.

ಶ್ರೀ ಟಿ. ಹನುಮಯ್ಯ.—ಹಳ್ಳಿಗಾಡುಗಳಲ್ಲೂ ಹೊಸದಾಗಿ ರಸ್ತೆಗಳು ಸರಿಯಾಗುವಂತೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸ್ಥಳೀಯ ಸಂಸ್ಥೆಗಳು ಎಂದರೆ ಮುನಿಸಿಪಾಲಟಿಗಳೂ ಸೇರುತ್ತವೆಯೇ ?

ಶ್ರೀ ಟಿ. ಚನ್ನಯ್ಯ.—ಸೇರುತ್ತವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮುನಿಸಿಪಾಲಟಿಗಳಿಗೆ ಸಾಲಕೊಟ್ಟಂತೆ ಪಂಚಾಯತಿಗಳಿಗೂ ಸಾಲ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಲ ತೀರಿಸುವ ಚೈತನ್ಯ ಇದ್ದರೆ ಸಹಾನುಭೂತಿಯಿಂದ ಅವರ ಬೇಡಿಕೆಯನ್ನು ಪರಿಶೀಲಿಸುತ್ತೇವೆ.

Ophthalmic Hospitals.

Q.—165. Sri B. RACHIAH (Yelandur—Scheduled Castes).—

Will the Government be pleased to state :—

(*a*) the nnmber of patients treated annually in the Minto Hospital, Bowring Hospital and K. R. Hospital Eye Departments ;

(*b*) the recurring expenditure of each hospital annually ?

A.—Sri T. CHANNIAH (Minister for Public Health and Local Self-Government).—

(*a*) —

Name of Institution	*Year*	*Number of patients treated*
1. Minto Ophthalmic Hospital, Bangalore.	1951-52	1,06,799
	1952-53	97,638
	1953-54	1,11,159
2. Bowring Hospital, Bangalore.	1951-52	44,476
	1952-53	54,490
	1953-54	61,634
3. Krishnarajendra Hospital, Mysore.	1951-52	82,490
	1952-53	85,083
	1953-54	91,452

(*b*) The following is the recurring expenditure of the Eye Sections of Bowring and Krishnarajendra Hospitals and of the Minto Ophthalmic Hospital :

1. Minto Ophthalmic Hospital Rs. 1,36,210.
2. Bowring Hospital Rs. 6,000.
3. Krishnarajendra Hospital, Mysore Rs. 35,756.

ಶ್ರೀ ಬಿ. ರಾಚಯ್ಯ.—ಇಲ್ಲಿ ಕೇವಲ ಮೂರು ಜಿಲ್ಲೆಗಳಲ್ಲಿ ಮಾತ್ರ ಕಣ್ಣು ಜೇನೆಯಿಂದ ನರಳುತ್ತಿರುವವರಿಗೆ ಚಿಕಿತ್ಸೆ ಮಾಡುವುದನ್ನು ತಿಳಿಸಿದೆ. ಬೇರೆ ಡಿಸ್ಟ್ರಿಕ್ಟ್‌ಗಳಲ್ಲೇನಾದರೂ ಈ ಬಗ್ಗೆ ಚಿಕಿತ್ಸೆಗೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಆಯಾ ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿರುವ ಡಾಕ್ಟರುಗಳಿಗೆ eye operationನಲ್ಲಿ ಅನುಭವವಿದ್ದ ಪಕ್ಷದಲ್ಲಿ ಅಲ್ಲಿಯೂ eye treatment ಮಾಡಲಾಗುತ್ತದೆ.